ಹಕ್ಕಾಡಿ ಆಸ್ಪತ್ರೆಯ ಹುದ್ದೆ ಇನ್ನೇ ದರ್ಜೆಯಾಗಿದ್ದು ಇನ್ನೇ ದರ್ಜೆ ವೈದ್ಯರ ನೇಮಕಾತಿ ಈಗ ಮಾಡುತ್ತಿಲ್ಲ. ಈ ಹುದ್ದೆಯನ್ನು ಮೈಲ್ವರ್ಜೆಗೆ ಏರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಅನಾಥಾಲಯಗಳ ಸಂಖ್ಯೆ

3680 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಅನಾಥಾಲಯಗಳಿವೆ?

ಆ) ಸರ್ಕಾರದ ಸಹಾಯಧನದಿಂದ ನಡೆಸಲ್ಪಡುವ ಎಷ್ಟು ಅನಾಥಾಲಯಗಳಿವೆ?

ಇ) ಇಂತಹ ಅನಾಥಾಲಯಗಳಿಗೆ ಸರ್ಕಾರವು ಯಾವ ತರದ ಸಹಾಯವನ್ನು ಕೊಡುತ್ತಿದೆ?

ಈ) ಸರ್ಕಾರವು ಕೊಡುವ ಸಹಾಯಧನ ಕಮ್ಮಿಯಾಗಿದ್ದು ಈ ಬಗ್ಗೆ ದೂರುಗಳು ಸರ್ಕಾರಕ್ಕೆ ಬಂದಿವೆಯೇ?

ಉ) ಅನಾಥ ಮಕ್ಕಳಿಗೆ ಹಿತರಕ್ಷಣೆಯಿಂದ ಸಹಾಯಧನ ಹೆಚ್ಚು ಮಾಡುವ ಆಲೋಚನೆ ಇದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 26.

ಆ) 26.

ಇ) ಭೋಜನ ವೆಚ್ಚದ ಅನುದಾನವಾಗಿ ಪ್ರತಿ ಮಗುವಿಗೆ ಮಾಸಿಕ 50-00 ರೂ. ನೀಡಲಾಗುತ್ತಿದೆ.

ಈ) ಹೌದು.

ಉ) ಇದೆ.

ಕೈಗಾರಿಕಾ ನೀತಿಯನ್ನು ಪುನರ್ ರೂಪಿಸುವುದು

3714 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಬಾರಿ ಮತ್ತು ಮಧ್ಯಮ ಕೈಗಾರಿಗಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೈಗಾರಿಕಾ ನೀತಿಯನ್ನು ಪುನರ್ ರೂಪಿಸಲು ಸರ್ಕಾರವು ಯೋಚಿಸಿದೆಯೇ?

ಆ) ಹಾಗಿದ್ದಲ್ಲಿ ಇದರ ರೂಪರೇಷಗಳೇನು?

ಶ್ರೀಮತಿ ಮನೋರಮ ಮಾದ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಭಾರತ ಸರ್ಕಾರವು ಇತ್ತೀಚೆಗೆ ಕೈಗಾರಿಕಾ ನೀತಿಯನ್ನು ಪರಿಷ್ಕೃತಗೊಳಿಸಿರುವ ಹಿನ್ನೆಲೆಯಲ್ಲಿ ಕೈಗಾರಿಕಾ ನೀತಿಯನ್ನು ಪರಿಷ್ಕೃತಗೊಳಿಸುವ ವಿಷಯ ಕರ್ನಾಟಕ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಅತಿ ಶೀಘ್ರದಲ್ಲಿಯೇ ರಾಜ್ಯ ಸರ್ಕಾರದ ಹೊಸ ಕೈಗಾರಿಕಾ ನೀತಿಯನ್ನು ರೂಪಿಸಿ ಆದೇಶವನ್ನು ಹೊರಡಿಸಲಾಗುವುದು.

ಚಿತ್ರದುರ್ಗ ಜಿಲ್ಲೆ ಆಸ್ಪತ್ರೆಯ ನೌಕರರಿಗೆ ವಸತಿ ಗೃಹ

3762 - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?